**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ 734/2017**

| | | | |
|---|---|---|---|
| ಹೆಸರು | | ಶ್ರೀ ಸಿ.ಪುಟ್ಟಮಲ್ಲು | ಚಾಸಾಃ 02 |
| ತಂದೆ ಹೆಸರು | | ಶ್ರೀ ಚಿಕ್ಕಣ್ಣ | ಫ್ರಾಸಾಃ 06 |
| ವಯಸ್ಸು | | 61 ವರ್ಷ | ಸಾಕ್ಷಿಯನ್ನು ದಿನಾಂಕಃ 15.04.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ನಿವೃತ್ತ ಜಂಟಿ ನಿರ್ದೇಶಕರು | |
| ವಾಸ | | ಕೊಳ್ಳೇಗಾಲ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

2017 ರಲ್ಲಿ ಗುಂಡ್ಲುಪೇಟೆಯಲ್ಲಿ ಉಪ ಚುನಾವಣೆ ನಡೆಯುತ್ತಿದ್ದ ಕಾರಣ ನಾನು ಅಲ್ಲಿ ಸೆಕ್ಟರ್ 4 ರ ಅಧಿಕಾರಿಯಾಗಿದ್ದೆ. ನನ್ನ ಜೊತೆಗೆ ಚಾಸಾ–1 ರವರು ಸಹ ನೇಮಕವಾಗಿದ್ದರು. 2017ನೇ ಸಾಲಿನಲ್ಲಿ ಚುನಾವಣೆ ನಡೆಯುತ್ತಿದ್ದಾಗ ಮೂರು ಜನರು ಕಾರಿನಲ್ಲಿ ಚುನಾವಣಾ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್ ಗಳನ್ನು ಸಂಗ್ರಹಿಸಿ ಕಾಂಗ್ರೆಸ್ ಪಕ್ಷಕ್ಕೆ ಮತ ಚಲಾಯಿಸಬೇಕು ಎಂದು ಇಲ್ಲದಿದ್ದರೆ ಚುನಾವಣಾ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್ ಗಳನ್ನು ರದ್ದುಗೊಳಿಸುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಎಂದು ಚಾಸಾ–5 ಮತ್ತು 6 ರವರು ದೂರು ನೀಡಿದರು. ಚಾಸಾ–5 ಮತ್ತು 6 ರವರು ಸದರಿ ವ್ಯಕ್ತಿಗಳು ಮತ್ತು ಕಾರನ್ನು ಹಿಡಿದು ಬೇಗೂರು ಠಾಣೆ ತಂದಿರುವುದಾಗಿ ನನಗೆ ತಿಳಿಸಿದರು. ಚಾಸಾ–5 ಮತ್ತು 6 ರವರು ನನಗೆ ಮೌಖಿಕವಾಗಿ ದೂರು ನೀಡಿದರು. ಸದರಿ ಕಾರಿನಲ್ಲಿ ಹೆಚ್.ಡಿ. ಪ್ರಸನ್ನಕುಮಾರ, ರಕ್ಷಿತ್ ಮತ್ತು ಹರೀಶ್ ಎ.ಒಲೆಕಾರ್ ಎಂಬುವವರು ಇದ್ದರು ಎಂದು ತಿಳಿಯಿತು. ನನ್ನ ಸಮಕ್ಷಮ ಹೆಚ್.ಡಿ. ಪ್ರಸನ್ನಕುಮಾರ, ರಕ್ಷಿತ್ ಮತ್ತು ಹರೀಶ್ ಎ.ಒಲೆಕಾರ್ ರವರು ಉಪಯೋಗಿಸಿದ ಕಾರನ್ನು ಅಮಾನತ್ತುಪಡಿಸಿಕೊಂಡು ಮಹಜರ್ ಜರುಗಿಸಿರುತ್ತಾರೆ.

ಸಾಕ್ಷಿಯು ನಿಪಿ1 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ1(ಡಿ) ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಆರೋಪಿಗಳನ್ನು ಮತ್ತು ಸದರಿ

ವಾಹನವನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಗಳು ಗೈರು ಹಾಜರಿದ್ದು, ಅತನ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 03.04.2017 ರಂದು ಚಾಸಾ–5 ಮತ್ತು 6 ರವರು ನನಗೆ ಕರೆ ಮಾಡಿ, ನನಗೆ ಮೌಖಿಕವಾಗಿ ದೂರು ನೀಡಿರುತ್ತಾರೆ ಎಂದರೆ ಸರಿ. ಸದರಿ ಕಾರ್ ನಂ.ಕೆಎ–51–ಎಂಸಿ–09 ಟಯೋಟ ಇನೋವ ಕಾರ್ ಎಂದರೆ ಸರಿ. ನಿಪಿ1 ನ್ನು ಚಾಸಾ–3 ಮತ್ತು 4 ರವರ ಸಮಕ್ಷಮ ಮಾಡಿದರು ಎಂದರೆ ಸರಿ. ಸದರಿ ಕಾರ್ ನ್ನು ಪರಿಶೀಲಿಸಿದಾಗ ಮೂರು ಬಟ್ಟೆ ಬ್ಯಾಗ್ ಗಳು ಕಂಡುಬಂದಿತು ಎಂದರೆ ಸರಿ. ಆ ಕಾಲಕ್ಕೆ ಆರೋಪಿಗಳು ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘನೆ ಮಾಡಿದರು ಎಂದರೆ ಸರಿ. ಆ ಕುರಿತು ಬೇಗೂರು ಪೊಲೀಸ್ ಠಾಣಾ ಆವರಣದಲ್ಲಿ ರಾತ್ರಿ 8.00 ರಿಂದ 8.30 ರವರೆಗೆ ನಿಪಿ1 ರವರೆಗೆ ಮಹಜರ್ ಜರುಗಿಸಿದರು ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಅಂದು ಸಂಜೆ 6.00 ಗಂಟೆಗೆ ರೇವಣ್ಣ ಎಂಬುವವರು ಕರೆ ಮಾಡಿದ್ದರು. ಆ ಕಾಲಕ್ಕೆ ನಾನು ಗುಂಡ್ಲುಪೇಟೆ ಟೌನ್ ನಲ್ಲಿ ಇದ್ದೆ. ಚಾಸಾ–1 ರವರು ನೀಡಿದ ದೂರಿನ ವಿಷಯಗಳನ್ನು ನಾನು ತಿಳಿದುಕೊಂಡಿದ್ದೇನೆ. ಎಷ್ಟು ಜನಗಳ ಚುನಾವಣಾ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್ ಗಳನ್ನು ಆರೋಪಿಗಳು ಸಂಗ್ರಹಿಸಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ಯಾರಿಗೆ ಬೇದರಿಕೆ ಹಾಕಿದ್ದರು ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ ಮತ್ತು ಅವರನ್ನು ಸಾಕ್ಷಿದಾರರಾಗಿ ಮಾಡಿಲ್ಲ. ಸರಿದ ಕಾರ್ ಬಿಳಿ ಬಣ್ಣದಾಗಿತ್ತು.

ಸದರಿ ಕಾರಿನ ಬಣ್ಣವನ್ನು ನನ್ನ ಹೇಳಿಕೆಯಲ್ಲಿ ಮತ್ತು ಮಹಜರ್ ನಲ್ಲಿ ಬರೆದಿರಬಹುದು. ನನ್ನ ಹೇಳಿಕೆಯಲ್ಲಿ ಸದರಿ ಕಾರಿನ ಬಣ್ಣವನ್ನು ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾರಿನ ಒಳಭಾಗದಲ್ಲಿ ಇದ್ದ ಬ್ಯಾಗಿನ ಬಣ್ಣ ನನಗೆ ಗೊತ್ತು. ಸದರಿ ಬಾಗ್ ನಲ್ಲಿ ಇದ್ದ ಬಟ್ಟೆಗಳು ಯಾರದು ಎಂದು ನನಗೆ ಗೊತ್ತಿಲ್ಲ. ಸದರಿ ಕಾರಿನಲ್ಲಿ ಕಾಂಗ್ರೆಸ್ ಪಕ್ಷದ ಬ್ಯಾಲೆಟ್ ಪೆಪರ್ ಗಳು ಸಿಗಲಿಲ್ಲ. ಆರೋಪಿಗಳು ಯಾವುದೆ ಚುನಾವಣಾ ಪ್ರಚಾರದಲ್ಲಿ ಬಾಗಿಯಾಗಿರಲಿಲ್ಲ ಮತ್ತು ಯಾರಿಗೂ ಬೇದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಕೋರಿಕೆ ಮೇರೆಗೆ ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.  ನನ್ನ ಸಮಕ್ಷಮ ನಿಪಿ1 ನ್ನು ಬರೆದಿಲ್ಲ ಮತ್ತು ಯಾವುದೆ ವಾಹನವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ  ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**